# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ವಿವಿಧ ಜಿಲ್ಲಾ ಪಂಚಾಯತ್‌ಗಳಲ್ಲಿ ಡಿ.ಆರ್.ಡಿ.ಎ. ಕಾರ್ಯಕ್ರಮದಡಿ ಕರ್ತವ್ಯ ನಿರ್ವಹಿಸುತ್ತಿರುವ ಅಧಿಕಾರಿ/ಸಿಬ್ಬಂದಿಯವರುಗಳ ವೇತನ ಲೆಕ್ಕ ಶೀರ್ಷಿಕೆ 2515ರಡಿ ಅನುದಾನವನ್ನು ಬಿಡುಗಡೆಗೊಳಿಸುವ ಬಗ್ಗೆ

ಓದಲಾಗಿದೆ:

1. ಕಡತ ಸಂಖ್ಯೆ: ಗ್ರಾಅಪ 10 ಎಸ್‌ಜಿವೈ (ಡಿಆರ್‌ಡಿಎ) 2014
2. ಕಡತ ಸಂಖ್ಯೆ: ಗ್ರಾಅಪ 22 ಎಸ್‌ಜಿವೈ (ಡಿಆರ್‌ಡಿಎ) 2014

ಪ್ರಸ್ತಾವನೆ:

ಮೇಲೆ (1) ಮತ್ತು (2)ರಲ್ಲಿ ಓದಲಾದ ಕಡತಗಳಲ್ಲಿ ಬೆಂಗಳೂರು(ನಗರ), ಕೋಲಾರ, ಶಿವಮೊಗ್ಗ, ಮೈಸೂರು, ಉತ್ತರ ಕನ್ನಡ, ಯಾದಗೀರ್, ದಾವಣಗೆರೆ ಮತ್ತು ಚಾಮರಾಜನಗರ ಜಿಲ್ಲಾ ಪಂಚಾಯತ್‌ಗಳಲ್ಲಿ ಡಿ.ಆರ್.ಡಿ.ಎ ಕಾರ್ಯಕ್ರಮದಡಿ ಕರ್ತವ್ಯ ನಿರ್ವಹಿಸುತ್ತಿರುವ ಅಧಿಕಾರಿ/ಸಿಬ್ಬಂದಿಯವರುಗಳ ವೇತನ ವೆಚ್ಚಕ್ಕಾಗಿ ಒಟ್ಟು ರೂ.362.07ಲಕ್ಷಗಳ ಅನುದಾನವನ್ನು ಲೆಕ್ಕ ಶೀರ್ಷಿಕೆ 2515-00-101-0-01(ಯೋಜನೆ) ಅಡಿ ಬಿಡುಗಡೆಗೊಳಿಸುವಂತೆ ಪ್ರಸ್ತಾವಿಸಲಾಗಿದೆ. ಪ್ರಸ್ತಾವನೆಯನ್ನು ಪರಿಶೀಲಿಸಿ ಸಂಬಂಧಪಟ್ಟ ಜಿಲ್ಲಾ ಪಂಚಾಯತ್‌ಗಳಿಗೆ ಅನುದಾನವನ್ನು ಬಿಡುಗಡೆಗೊಳಿಸುವ ಸಂಬಂಧ ಕೆಳಗಿನಂತೆ ಆದೇಶಿಸಿದೆ.

## ಸರ್ಕಾರದ ಆದೇಶ ಸಂಖ್ಯೆ: ಆಇ 155 ವೆಚ್ಚ6/2014 ದಿನಾಂಕ:20ನೇ ಸೆಪ್ಟೆಂಬರ್ 2014

ಪ್ರಸ್ತಾವನೆಯಲ್ಲಿ ವಿವರಿಸಿರುವಂತೆ ಯೋಜನೆ ಲಿಂಕ್ ಡಾಕ್ಯುಮೆಂಟ್ ಲೆಕ್ಕ ಶಿರ್ಷಿಕೆ 2515-00-101-0-01-101-ಡಿ.ಆರ್.ಡಿ.ಎ. ಆಡಳಿತ ವೆಚ್ಚ ಕಾರ್ಯಕ್ರಮದಡಿ ಕರ್ತವ್ಯ ನಿರ್ವಹಿಸುತ್ತಿರುವ ಅಧಿಕಾರಿ/ಸಿಬ್ಬಂದಿಯವರುಗಳ ವೇತನಕ್ಕೆ ಕೊರತೆಯಾಗಿರುವ ರೂ.362.07ಲಕ್ಷ (ರೂಪಾಯಿ ಮೂರು ನೂರ ಅರವತ್ತೆರಡು ಲಕ್ಷದ ಏಳು ಸಾವಿರಗಳು ಮಾತ್ರ)ಗಳ ಅನುದಾನವನ್ನು ಕೆಳಕಂಡ ಜಿಲ್ಲಾ ಪಂಚಾಯತ್‌ಗಳಿಗೆ ಲೆಕ್ಕ ಶೀರ್ಷಿಕೆ 2515-00-196-6-06(ಯೋಜನೆ) ಅಡಿ ಬಿಡುಗಡೆಗೊಳಿಸಲಾಗಿದೆ. ಬಿಡುಗಡೆಯಾದ ಅನುದಾನವನ್ನು ಜಿಲ್ಲಾ ಪಂಚಾಯತ್ ನಿಧಿ-1ಕ್ಕೆ ಜಮೆ ಮಾಡಿಕೊಂಡು ನಿಯಮಾನುಸಾರ ವೆಚ್ಚ ಭರಿಸಲು ಆದೇಶಿಸಿದೆ.

| | |
|---|---|
| 1. ಜಿಲ್ಲಾ ಪಂಚಾಯತ್, ಬೆಂಗಳೂರು(ನಗರ)-401 | ರೂ. 67.17ಲಕ್ಷ |
| 2. ಜಿಲ್ಲಾ ಪಂಚಾಯತ್, ಕೋಲಾರ-404 | ರೂ. 37.66ಲಕ್ಷ |
| 3. ಜಿಲ್ಲಾ ಪಂಚಾಯತ್, ಶಿವಮೊಗ್ಗ-405 | ರೂ. 56.93ಲಕ್ಷ |
| 4. ಜಿಲ್ಲಾ ಪಂಚಾಯತ್, ಮೈಸೂರು-407 | ರೂ. 66.66ಲಕ್ಷ |
| 5. ಜಿಲ್ಲಾ ಪಂಚಾಯತ್, ಉತ್ತರ ಕನ್ನಡ-416 | ರೂ. 1.99ಲಕ್ಷ |
| 6. ಜಿಲ್ಲಾ ಪಂಚಾಯತ್, ಯಾದಗೀರ್-421 | ರೂ. 33.33ಲಕ್ಷ |
| 7. ಜಿಲ್ಲಾ ಪಂಚಾಯತ್, ದಾವಣಗೆರೆ-451 | ರೂ. 58.33ಲಕ್ಷ |
| 8. ಜಿಲ್ಲಾ ಪಂಚಾಯತ್, ಚಾಮರಾಜನಗರ-456 | ರೂ. 40.00ಲಕ್ಷ |
| ಒಟ್ಟು | ರೂ.362.07ಲಕ್ಷ |

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು
ಅವರ ಹೆಸರಿನಲ್ಲಿ

(ಕೆ. ಮುರಳೀಧರ)
ಸರ್ಕಾರದ ಅಧೀನ ಕಾರ್ಯದರ್ಶಿ,
ಆರ್ಥಿಕ ಇಲಾಖೆ(ವೆಚ್ಚ 5)

1. ಮಹಾಲೇಖಪಾಲರು (ಎ&ಇ), ಲೆಕ್ಕ ಪರಿಶೋಧನೆ 1&2, ಕರ್ನಾಟಕ, ಬೆಂಗಳೂರು

ಮು.ತಿ.ನೋ...

2. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆ .
3. ಸಂಬಂಧಪಟ್ಟ ಜಿಲ್ಲಾ ಪಂಚಾಯತ್‌ಗಳ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳು/ಮುಖ್ಯ ಲೆಕ್ಕಾಧಿಕಾರಿಗಳು,
4. ಉಪ ನಿರ್ದೇಶಕರು, ಖಜಾನೆ ಗಣಕಜಾಲ ನಿರ್ವಹಣಾ ಕೇಂದ್ರ, ಖನಿಜ ಭವನ, ಬೆಂಗಳೂರು
5. ಸಂಬಂಧಪಟ್ಟ ಜಿಲ್ಲಾ ಖಜಾನಾಧಿಕಾರಿಗಳು,
6. ರಕ್ಷಾ ಕಡತಕ್ಕೆ
7. ಹೆಚ್ಚುವರಿ ಪ್ರತಿಗಳು